ಅಧ್ಯಕ್ಷರು : ನೀವು ಪ್ರಶ್ನೆಗಳನ್ನು ಸ್ವಲ್ಪದರಲ್ಲಿ ಕೇಳಿಕೊಂಡು ಉತ್ತರಗಳನ್ನು ತೆಗೆದುಕೊಂಡರೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟರೆ ಈ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು : ಹೆಚ್ಚು ಕೇಳುತ್ತಾ ಹೋದರೆ ಟೈಮ್ ಆಗಿಯೇ ಆಗುತ್ತದೆ. ನನಗೇನೂ, ಅವರು ಯಾವ ಪ್ರಶ್ನೆಯನ್ನೂ ಕೇಳಬಾರದು ಎಂದು ಇಚ್ಛೆಯಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ ; ಇದನ್ನು ಹೆಲ್ಡ್ ಓವರ್ ಆದರೂ ಮಾಡಿಸಿ. ಇದಕ್ಕೆ ಹೇಗೆ ಅವಕಾಶ ಮಾಡಿಕೊಡುತ್ತೀರೋ ನೋಡಿ.

ಅಧ್ಯಕ್ಷರು : ಆ ಪ್ರಶ್ನೆಯನ್ನು ನಾನು ಹೆಲ್ಡ್‌ಓವರ್ ಮಾಡಿದ್ದೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಎರಡು ನಿಮಿಷಗಳಲ್ಲಿ ಇದು ಮುಗಿದಿರುತ್ತಿತ್ತು. ಇದು ಏಕೆಂದು ನನಗೆ ಅರ್ಥವಾಗುತ್ತಿಲ್ಲ. ಆರೇಳು ಸಲ ನನ್ನ ಪ್ರಶ್ನೆ ಬಂದಿಲ್ಲ. ಈ ಒಂದು ಪ್ರಶ್ನೆಯನ್ನೂ ಮೊಟಕುಗೊಳಿಸಿಬಿಟ್ಟರೆ, ಇದರ ಅರ್ಥ ಏನು?

ಅಧ್ಯಕ್ಷರು : ಮೊಟಕುಗೊಳಿಸಿದ್ದುದು ನಾನಲ್ಲ. ಅದನ್ನು ನೀವು ನೋಡಿಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಒಂದು ಗಂಟೆ ಇದ್ದರೆ,ಒಂದು ಗಂಟೆ ಹತ್ತು ನಿಮಿಷ ತೆಗೆದುಕೊಂಡಿದ್ದೇನೆ. ನಿಮ್ಮ ಪ್ರಶ್ನೆಯನ್ನು ಹೆಲ್ಡ್‌ಓವರ್ ಮಾಡಿದ್ದೇನೆ. ಸದಸ್ಯರಾದ ತಾವು ಸಹಕರಿಸಬೇಕು. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ವಿ. ವೆಂಕಟಪ್ಪ : ನಾವು ಸಹಕರಿಸುತ್ತಿದ್ದೇವೆ.ದಯವಿಟ್ಟು ಕೊನೆಯ ಪಕ್ಷ ನಾಳೆ ಅಥವಾ ಮುಂದಿನವಾರ ಈ ಪ್ರಶ್ನೆಯನ್ನು ಹಾಕಿಕೊಳ್ಳಬೇಕು.

ಅಧ್ಯಕ್ಷರು : ತಾವು ಉಪ ಪ್ರಶ್ನೆ ತಯಾರು ಮಾಡಿಕೊಂಡು ಬರುವುದಿಲ್ಲ. ಇಲ್ಲಿ ಬಂದು ಪುನಃ ಅದನ್ನೇ ಕೇಳಿಕೊಳ್ಳುತ್ತಾ ಇದ್ದರೆ ಹೇಗೆ?

ಶ್ರೀ ಎಂ.ವಿ. ವೆಂಕಟಪ್ಪ : ನಾನು ತಯಾರು ಮಾಡಿಕೊಂಡೇ ಬಂದಿದ್ದೇನೆ. ತಾವು ಕರೆಯದೇ ಇದ್ದರೆ ಹೇಗೆ? ಇದೊಂದೇ ಪ್ರಶ್ನೆಯನ್ನು ಮುಂದೆ ಹಾಕುವುದಕ್ಕೆ ಕಾರಣ ಏನು? ನನ್ನದು ಲಾಸ್ಟ್ ಬಟ್ ಓನ್ ಪ್ರಶ್ನೆ ಇದೆ. ಇಷ್ಟು ಹೊತ್ತಿಗೆ ಅದನ್ನು ಕೇಳಿ ಮುಗಿಸಬಹುದಾಗಿತ್ತು.

ಅಧ್ಯಕ್ಷರು : ತಮ್ಮ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆಂದು ಹೇಳಿದ್ದೇನಲ್ಲಾ? ತಾವು ಸರಿಯಾಗಿ ಕೇಳುವುದಿಲ್ಲ. ತಮ್ಮದು ಮತ್ತು ಅವರದ್ದು ಎರಡು ಪ್ರಶ್ನೆಗಳನ್ನು ಹೆಲ್ಡ್ ಓವರ್ ಮಾಡಿದ್ದೇನೆ.

ಶ್ರೀ ಎಂ.ವಿ. ವೆಂಕಟಪ್ಪ : ನಾವು ತಯಾರಿ ಮಾಡಿಕೊಂಡೇ ಬಂದಿದ್ದೇವೆ. ಆದರೂ ಅವಕಾಶ ಸಿಕ್ಕಿಲ್ಲ . Iam very sorry.

ಅಧ್ಯಕ್ಷರು : ಹೆಲ್ಡ್ ಓವರ್ ಮಾಡಿದ್ದೇನೆಂದು ಹೇಳಿದ್ದೇನಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ಬಿಡಿ, ಹೆಲ್ಡ್ ಓವರ್ ಮಾಡಿದ್ದಾರಂತೆ.

ಅಧ್ಯಕ್ಷರು : ಈಗ ವರದಿಯನ್ನೊಪ್ಪಿಸುವುದು.

ವರದಿಗಳನ್ನೊಪ್ಪಿಸುವುದು.

ಡಾ: ಎ.ಬಿ. ಮಲಕರೆಡ್ಡಿ (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) : ಸಾರ್ವಜನಿಕ ಉದ್ದಿಮೆಗಳ ಸಮಿತಿಯ 60 ಮತ್ತು 61ನೇ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

I ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) 1978ನೇ ಸಾಲಿನ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3) ಉಪ ಅನುಚ್ಛೇದದ ಗನೇ ಕಲಮಿನ ಮೇರೆಗೆ

1. 1993 ನೇ ಸಾಲಿನ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು(ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ)ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 4-12-1993 ರಂದು ಹೊರಡಿಸಲಾದ ಡಿಪಿಎಆರ್ 35 ಎಸ್ ಆರ್ ಎ 93ನೇ ಕ್ರಮಾಂಕದ ಅಧಿಸೂಚನೆ.
2. 1993ನೇ ಇಸವಿಯ ಕಾಲೇಜು ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ22-11-1993ರಂದು ಹೊರಡಿಸಲಾದ ಸಿಆಸು 33 ಸೇನಿಇ 93ನೇ ಕ್ರಮಾಂಕದ ಅಧಿಸೂಚನೆ
3. 1993ನೇ ಇಸವಿಯ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ 4-12-1993ರಂದು ಹೊರಡಿಸಲಾದ ಡಿಪಿಎಆರ್ 12 ಎಸ್ಆರ್ಇ 93ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀಹಾರನಹಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ಸಚಿವರು) ಅವರ ಪರವಾಗಿ ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿ.

ಕರ್ನಾಟಕ ಭೂ ಕಂದಾಯ ನಿಯಮ 1964ರ ಪ್ರಕರಣ 194(2)ನೇ ಕಲಮಿನ ಮೇರೆಗೆ,

1. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 4 ಗ್ರಾಮಗಳ 1984-85ನೇ ಸಾಲಿನ ಭೂ ಕಂದಾಯ 1469.46 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 29-11-93ರಂದು ಹೊರಡಿಸಲಾದ ಆರ್ಡಿ 97 ಟಿಆರ್ಎಂ 93ನೇ ಕ್ರಮಾಂಕದ ಅಧಿಸೂಚನೆ,
2. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ 27 ಗ್ರಾಮಗಳ 1981-82ನನೇ ಸಾಲಿನ ಭೂ ಕಂದಾಯ 42969.59 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 30-11-93ರಂದು ಹೊರಡಿಸಲಾದ ಆರ್ಡಿ 103 ಟಿಆರ್ಎಂ 93ನೇ ಕ್ರಮಾಂಕದ ಅಧಿಸೂಚನೆ.
3. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ 24 ಗ್ರಾಮಗಳ 1986-87ನೇ ಸಾಲಿನ ಭೂ ಕಂದಾಯ 26006.90ರೂ.ಗಳನ್ನು ಮನ್ನಾಮಾಡುವ ಸಂಬಂಧದಲ್ಲಿ ದಿನಾಂಕ 29-11-93ರಂದು ಹೊರಡಿಸಲಾದ ಆರ್ಡಿ 105 ಟಿ.ಆರರ್ಎಂ 93ನೇ ಕ್ರಮಾಂಕದ ಅಧಿಸೂಚನೆ,
4. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 29 ಗ್ರಾಮಗಳ 1973-74ನೇ ಸಾಲಿನ ಭೂ ಕಂದಾಯ 159812.07 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 1-12-93ರಂದು ಹೊರಡಿಸಲಾದ ಆರ್ಡಿ 106ಟಿ.ಆರ್ಎಂ 93ನೇ ಕ್ರಮಾಂಕದ ಅಧಿಸೂಚನೆ,
5. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ 9 ಗ್ರಾಮಗಳ 1981-82ನೇ ಸಾಲಿನ ಭೂ ಕಂದಾಯ 16055.47 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ